5	ಸಿದ್ದಾಪುರ, ಉತ್ತರ ಕನ್ನಡ ಜಿಲ್ಲೆ	ಶಿರಸಿ, ವಿಧಾನಸಭಾ ಕ್ಷೇತ್ರ
6	ಹೊಸಕೋಟೆ ಬೆಂಗಳೂರು ಗ್ರಾಮಾಂತರ ಜಿಲ್ಲೆ	ಹೊಸಕೋಟೆ, ವಿಧಾನಸಭಾ ಕ್ಷೇತ್ರ
7	ಸೊರಬ, ಶಿವಮೊಗ್ಗ ಜಿಲ್ಲೆ	ಸೊರಬ, ವಿಧಾನಸಭಾ ಕ್ಷೇತ್ರ
8	ಸಾಗರ, ಶಿವಮೊಗ್ಗ ಜಿಲ್ಲೆ	ಸಾಗರ, ವಿಧಾನಸಭಾ ಕ್ಷೇತ್ರ
9	ಶಿಗ್ಗಾಂವ, ಹಾವೇರಿ ಜಿಲ್ಲೆ	ಶಿಗ್ಗಾಂವ, ವಿಧಾನಸಭಾ ಕ್ಷೇತ್ರ
10	ಹುಬ್ಬಳ್ಳಿ-ಧಾರವಾಡ, ಧಾರವಾಡ ಜಿಲ್ಲೆ	ಹುಬ್ಬಳ್ಳಿ ಗ್ರಾಮಾಂತರ, ವಿಧಾನಸಭಾ ಕ್ಷೇತ್ರ

ಇ) ಇಲ್ಲ.

ಈ) ಚಾಮರಾಜನಗರ ಜಿಲ್ಲೆಯಲ್ಲಿ ಮೂರು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳು, 10 ಅನುದಾನಿತ ಮತ್ತು 11 ಅನುದಾನರಹಿತ ಖಾಸಗೀ ಕೈಗಾರಿಕಾ ತರಬೇತಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿರುವ ಕಾರಣ ಮಂಜೂರಾತಿ ನೀಡಲಾಗಿರುವುದಿಲ್ಲ.

442 (772) ಶ್ರೀ ಪುಟ್ಟೇಗೌಡ ಸಿ.ಎಸ್. (ಶ್ರವಣ ಬೆಳಗೊಳ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲೆಯಲ್ಲಿರುವ ಸಮುದಾಯ ಆಸ್ಪತ್ರೆಗಳ ಸಂಖ್ಯೆ ಎಷ್ಟು; ಹೋಬಳಿವಾರು ಹಾಗೂ ತಾಲ್ಲೂಕುವಾರು ಮಾಹಿತಿ ನೀಡುವುದು;

ಆ) ಸದರಿ ಸಮುದಾಯ ಆಸ್ಪತ್ರೆಗಳಲ್ಲಿ ವೈದ್ಯರುಗಳ ಹಾಗೂ ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಕೊರತೆ ಇರುವ ವೈದ್ಯರು ಮತ್ತು ಸಿಬ್ಬಂದಿಗಳ ಸಂಖ್ಯೆಯನ್ನು

ಸಮುದಾಯ ಆಸ್ಪತ್ರೆವಾರು ಮಾಹಿತಿ ನೀಡುವುದು; ಸಿಬ್ಬಂದಿಗಳ ಸಂಖ್ಯೆಯನ್ನು ಸಮುದಾಯ ಆಸ್ಪತ್ರೆವಾರು ಮಾಹಿತಿ ನೀಡುವುದು;

ಇ) ಕೊರತೆಯಿರುವ ವೈದ್ಯರುಗಳ ಕಾಲೇಜಿನ ಹಾಗೂ ಸಿಬ್ಬಂದಿಗಳ ಹುದ್ದೆಗಳನ್ನು ತುಂಬಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಪೂರ್ಣ ಮಾಹಿತಿ ನೀಡುವುದು?

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಹಾಸನ ಜಿಲ್ಲೆಯಲ್ಲಿ 22 ಸಮುದಾಯ ಕೇಂದ್ರಗಳನ್ನು ಮಂಜೂರು ಮಾಡಲಾಗಿದೆ. ಅವುಗಳ ತಾಲ್ಲೂಕುವಾರು ವಿವರ ಈ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ತಾಲ್ಲೂಕು	ಸಮುದಾಯ ಆರೋಗ್ಯ ಕೇಂದ್ರಗಳು
1	ಅರಸೀಕೆರೆ	1. ಅರಸೀಕೆರೆ 2. ಗಂಡಸಿ 3. ಜೆ.ಸಿ.ಪುರ
2	ಅರಕಲಗೂಡು	4. ಅರಕಲಗೂಡು 5. ಕೊಣನೂರು
3	ಬೇಲೂರು	6. ಬೇಲೂರು 7. ಹಳೇಬೀಡು 8. ಅರೆಹಳ್ಳಿ
4	ಚನ್ನರಾಯಪಟ್ಟಣ	9. ಚನ್ನರಾಯಪಟ್ಟಣ 10. ಹಿರಿಸಾವೆ 11. ನುಗ್ಗೇಹಳ್ಳಿ 12. ಶ್ರವಣ ಬೆಳಗೊಳ 13. ಉದಯಪುರ
5	ಹೊಳೆನರಸೀಪುರ	14. ಹೊಳೆನರಸೀಪುರ 15. ಹಳ್ಳಿಮೈಸೂರು 16. ದೊಡ್ಡಕುಂಟೆ

		17. ಪಡವಲಹಿಪ್ಪೆ
6	ಸಕಲೇಶಪುರ	18. ಸಕಲೇಶಪುರ
7	ಆಲೂರು	19. ಆಲೂರು
8	ಹಾಸನ	20. ದುದ್ದ 21. ಶಾಂತಿಗ್ರಾಮ 22. ಮೊಸಳೇ ಹೊಸಳ್ಳಿ

ಆ) ಬಂದಿದೆ.

ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಕೊರತೆಯಿರುವ ವೈದ್ಯರು ಮತ್ತು ಸಿಬ್ಬಂದಿಗಳ ವಿವರವನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

ಇ) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ಕುರಿತಂತೆ ಸರ್ಕಾರ ಕೈಗೊಂಡಿರುವ ಕ್ರಮಗಳ ವಿವರಗಳನ್ನು ಅನುಬಂಧ–2 ರಲ್ಲಿ ನೀಡಲಾಗಿದೆ.

ದಿನಾಂಕ ಸೆಪ್ಟೆಂಬರ್‌ರಂದು ಶ್ರೀಯುತ ಅರಸೀಕೆರೆ ಕ್ಷೇತ್ರದ ಶಾಸಕರು ಕೇಳಿದ

– ಪ್ರಶ್ನೆ ಸಂಖ್ಯೆ – 1

L.A. 772

CHC

Designation	S.Balagutte			Hirisave			Udeyapure			Nuggehalli			Paduvalhippe			Halli mysore			D.Lunche			Arsikalli			Hiriyabidu			S.grama			Duddda			Mosale Hosalli			Gandhi			J.C.pura			Konanur			Total	
	S	W	V	S	W	V	S	W	V	S	W	V	S	W	V	S	W	V	S	W	V	S	W	V	S	W	V	S	W	V	S	W	V	S	W	V	S	W	V	S	W	V	S	W
1 Specialist	3	3	–	4	3	1	4	3	1	5	3	2	4	1	3	5	3	2	5	1	4	4	2	2	4	2	2	5	2	3	5	2	3	2	1	3	5	5	–	4	1	3	4	4	–	65	31
2 Dentist	1	1	–	1	1	–	1	–	1	–	–	–	1	–	1	–	–	–	–	–	–	1	–	1	1	–	1	1	–	1	–	–	–	–	–	–	–	–	–	1	–	1	1	–	1	10	2
3 S/Nurse	5	5	0	8	3	5	6	0	6	6	0	6	7	1	6	9	5	4	1	1	0	6	0	6	6	1	5	6	1	5	6	2	4	6	3	3	6	0	4				6	2	4	80	26
4 Refractionist	1	1	–	–	–	–	1	1	–	–	–	–	–	–	–	1	1	0	–	–	–	–	–	–	–	–	–	–	–	–	–	–	–	–	–	1	1	–	–	–	–	–	–	4	4
5 X-ray tec	1	1	–	1	1	–	–	–	–	–	–	–	–	–	–	1	1	–	–	–	–	–	–	–	–	–	–	–	–	–	1	1	–	–	–	–	1	0	–	–	–	–	–	5	4
6 Pharmacist	2	2	0	2	2	0	1	1	0	1	1	0	1	0	1	1	1	0	1	0	0	1	0	1	1	1	0	1	1	0	1	0	1	1	0	1	1	0	1	0	0	1	1	1	0	17	12
7 Lab-Tec	1	1	0	1	0	1	1	1	0	1	1	0	1	0	1	1	1	0	1	1	0	1	1	0	1	1	0	1	1	0	1	1	0	1	0	1	1	1	0	–	–	–	1	1	0	14	11
8 Off-Supdt	1	0	1	1	0	1	1	0	1	–	–	–	1	0	1	–	–	–	–	–	–	1	0	1	1	1	0	1	1	0	1	0	1	–	–	–	1	1	0	–	–	–	–	–	1	0	1	9	2
9 FDA	2	1	1	1	0	1	1	0	1	–	–	–	1	0	1	1	1	0	1	0	1	–	–	–	1	1	0	1	1	0	1	1	0	–	–	–	1	1	0	–	–	–	–	–	1	0	1	12	4
10 FDA	1	1	0	2	3	0	1	1	0	–	–	–	1	1	0	1	1	0	1	–	–	–	–	–	1	1	0	1	1	0	1	1	0	–	–	–	1	1	0	1	1	0	–	–	–	1	1	0	13	10
11 Cle/typist	–	–	–	–	–	–	1	1	0	–	–	–	1	1	0	–	–	–	–	–	–	1	1	0	1	1	0	1	1	0	1	1	0	–	–	–	1	1	0	–	–	–	–	–	1	0	1	7	4
12 Driver	1	1	–	1	1	–	3	1	1	–	–	–	2	–	2	1	1	–	–	–	–	1	1	0	1	1	0	1	1	0	1	1	0	1	1	0	1	1	0	1	1	0	2	–	2	20	8
13 SR.Pharma	–	–	–	–	–	–	–	–	–	–	–	–	–	–	–	–	–	–	–	–	–	–	–	–	–	–	–	–	–	–	–	–	–	–	–	–	–	–	–	–	–	–	–	–	–
14 Sr H.Ast(M)	1	1	0	–	–	–	–	–	–	–	–	–	1	1	0	1	1	0	1	–	–	–	–	–	1	1	0	1	1	0	1	1	0	–	–	–	1	1	0	1	–	–	–	–	1	1	0	9	6
15 Sr H.Ast(F)	1	1	–	–	–	–	–	–	–	–	–	–	–	–	–	1	–	–	1	1	–	1	–	–	–	–	–	–	–	–	1	0	1	–	–	–	–	–	–	–	–	–	–	–	–	–	6	5
16 Jr. H.Ast (M)	2	2	0	–	–	–	4	3	1	–	–	–	1	1	0	2	0	2	2	1	1	4	1	3	2	1	–	5	3	2	2	0	2	–	–	–	4	1	3	–	–	–	3	1	2	32	15
17 Jr. H.Ast (F)	7	5	2	2	1	1	8	8	0	7	1	0	6	6	0	3	3	0	2	1	1	7	7	0	2	2	0	9	8	1	3	3	0	1	1	0	4	4	0	2	2	0	5	5	1	57	50
18 BHEO	1	1	0	–	–	–	1	1	0	–	–	–	–	–	–	–	–	–	–	–	–	–	–	–	–	–	–	1	1	0	–	–	–	–	–	–	1	1	0	–	–	–	–	–	4	2
19 Group 'D'	8	6	2	13	4	9	12	3	9	8	1	7	12	3	9	10	6	4	11	4	6	6	4	2	12	3	9	12	2	7	12	5	7	12	1	11	5	2	3	7	4	3	12	6	6	146	52
																																													510	251

ಅನುಬಂಧ – 2

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ವಿವಿಧ ವೃಂದಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ತೆಗೆದುಕೊಂಡಿರುವ/ತೆಗೆದುಕೊಳ್ಳಲಿರುವ ಕ್ರಮಗಳ ವಿವರ

1. ತಜ್ಞ ವೈದ್ಯರ ಖಾಲಿ ಹುದ್ದೆಗಳನ್ನು 2010 ರಲ್ಲಿ ಸ್ನಾತಕೋತ್ತರ ವ್ಯಾಸಂಗ ಮುಗಿಸಿ ಬರುವ ವೈದ್ಯರಿಗೆ ಸ್ಥಳನಿಯುಕ್ತಿ ಮಾಡುವ ಮೂಲಕ ಆದ್ಯತಾನುಸಾರ ಭರ್ತಿ ಮಾಡಲು ಕ್ರಮವಹಿಸ ಲಾಗುವುದು.
2. (1) ಮಕ್ಕಳ ತಜ್ಞರು, (2) ಅರವಳಿಕೆ ತಜ್ಞರು ಹಾಗೂ (3) ಸ್ತ್ರೀರೋಗ ತಜ್ಞರುಗಳ ಕೊರತೆಯನ್ನು ನೀಗಿಸಲು ಮಾಸಿಕ ಗರಿಷ್ಟ ರೂ. 50,000 ರವರೆಗೆ ಗೌರವಧನ ನೀಡಿ ನೇಮಕ ಮಾಡಿಕೊಳ್ಳಲು ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನದ (ಎನ್.ಆರ್. ಹೆಚ್.ಎಂ.) ಅಡಿ ಅವಕಾಶ ಕಲ್ಪಿಸಲಾಗಿದೆ. ಹಾಗೂ ಇದೇ ಯೋಜನೆಯಡಿ ಪ್ರಕರಣವಾರು ಆಧಾರದ ಮೇಲೆ ಪ್ರತೀ ಪ್ರಕರಣವೊಂದಕ್ಕೆ (1) ಮಕ್ಕಳ ತಜ್ಞರಿಗೆ ರೂ.500, (2) ಅರವಳಿಕೆ ತಜ್ಞರಿಗೆ ರೂ.1,000 ಹಾಗೂ (3) ಸ್ತ್ರೀರೋಗ ತಜ್ಞರಿಗೆ ರೂ.1,500 ರಂತೆ ನೀಡಲು ಸಹ ಅವಕಾಶ ಕಲ್ಪಿಸಲಾಗಿದೆ.
3. ಕರ್ನಾಟಕ ಆರೋಗ್ಯ ಪದ್ಧತಿ ಅಭಿವೃದ್ಧಿ ಸುಧಾರಣಾ ಯೋಜನೆ (ಕೆ.ಹೆಚ್.ಎಸ್.ಡಿ.ಆರ್.ಪಿ) ರ ಅಡಿಯಲ್ಲಿ ಮೇಲಿನ ಕ್ರಮ ಸಂಖ್ಯೆ:2 ರಲ್ಲಿ ತಿಳಿಸಿರುವ 3 ತಜ್ಞತೆಗಳನ್ನು ಹೊರತುಪಡಿಸಿ ಉಳಿದ ತಜ್ಞತೆಯಲ್ಲಿ ಮಾಸಿಕ ರೂ.5,000 ಗೌರವ ಧನ ನೀಡಿ ರಿಟೈನರ್ ಶಿಪ್ ಆಧಾರದ ಮೇಲೆ ನೇಮಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಇದೇ ಕೆ.ಹೆಚ್.ಎಸ್.ಆರ್.ಡಿ.ಪಿ. ಯೋಜನೆಯಡಿ, ಸದರಿ ತಜ್ಞರು ಹೊರರೋಗಿ ವಿಭಾಗದಲ್ಲಿ ಕಾರ್ಯನಿರ್ವಹಿಸಿದ್ದಲ್ಲಿ ದಿನವೊಂದಕ್ಕೆ ರೂ.1,000 ದಂತೆ ಗೌರವ ಧನ ನೀಡಲು ಅವಕಾಶ ಕಲ್ಪಿಸಲಾಗಿದೆ. ಆದರೆ ವಾರಕ್ಕೆ ಎರಡು ದಿನಕ್ಕೆ ಮಾತ್ರ ಅಂತಹ ಸೇವೆಯನ್ನು ಪಡೆಯಲು ಮಿತಿಗೊಳಿಸಲಾಗಿದೆ.

4. ಎಂ.ಬಿ.ಬಿ.ಎಸ್. ವೈದ್ಯರಿಗೆ ಅರವಳಿಕೆ ಹಾಗೂ ಸಿಜೇರಿಯನ್ ಶಸ್ತ್ರಚಿಕಿತ್ಸೆಗಳಿಗೆ ತರಬೇತಿ ನೀಡಲಾಗುತ್ತಿದ್ದು ಈ ಮೂಲಕ ಸ್ತ್ರೀ ರೋಗ ಹಾಗೂ ಅರವಳಿಕೆ ತಜ್ಞರ ಕೊರತೆಯನ್ನು ನೀಗಿಸಲು ಕ್ರಮವಹಿಸಲಾಗಿದೆ.
5. ಇಲಾಖೆಯಲ್ಲಿ ಖಾಲಿ ಇರುವ 562 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳನ್ನು ನೇಮಕಾತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ನೇಮಕಾತಿ ಪ್ರಕ್ರಿಯೆ ಮುಗಿದ ನಂತರ ಆದ್ಯತಾನುಸಾರ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.
6. ವಿಶೇಷ ನೇರ ನೇಮಕಾತಿ ಸಮಿತಿಯ ಮುಖಾಂತರ 5021 ಅರೆವೈದ್ಯಕೀಯ ಹುದ್ದೆಗಳನ್ನು ನೇಮಕಾತಿ ಮಾಡುವ ಪ್ರಕ್ರಿಯೆ ಜಾರಿಯಲ್ಲಿದೆ. ಅದು ಪೂರ್ಣಗೊಂಡ ನಂತರ ಆದ್ಯತಾನುಸಾರ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ವಹಿಸಲಾಗುವುದು.
7. ಕರ್ನಾಟಕ ಲೋಕ ಸೇವಾ ಆಯೋಗದ ಮೂಲಕ 224 ಪ್ರಥಮ ದರ್ಜೆ ಸಹಾಯಕರ ಹುದ್ದೆಗಳನ್ನು ಭರ್ತಿ ಮಾಡಲು ಪ್ರಸ್ತಾವನೆ ಸಲ್ಲಿಸಲಾಗಿದೆ.
8. ಪ್ರಸ್ತುತ ಗ್ರೂಪ್-ಡಿ ನೌಕರರ ವೃಂದದಲ್ಲಿ ನೇಮಕಾತಿ ಮಾಡಲು ನಿಷೇಧವಿದ್ದು, ಅವಶ್ಯವಿರುವೆಡೆ ಬಾಹ್ಯ ಮೂಲಗಳಿಂದ ಸೇವೆ ಪಡೆದು ನಿರ್ವಹಿಸಲು ಕ್ರಮವಹಿಸಲಾಗಿದೆ.

ಕೆನೆ ಪದರ ಆದಾಯದ ಮಿತಿ ಹೆಚ್ಚಿಸುವುದು

443 (386) ಶ್ರೀರಾಮಲಿಂಗಾರೆಡ್ಡಿ (ಬಿ.ಟಿ.ಎಂ. ಲೇಔಟ್) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆನೆಪದರ ಆದಾಯದ ಮಿತಿ ಹೆಚ್ಚಳ ಮಾಡುವಂತೆ ಹಿಂದುಳಿದ ವರ್ಗಗಳ ಆಯೋಗ ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆಯೇ;

ಆ) ಮಾಡಿದ್ದಲ್ಲಿ ಸರ್ಕಾರ ಆ ನಿಟ್ಟಿನಲ್ಲಿ ಕೈಗೊಂಡ ಕ್ರಮಗಳೇನು;

ಇ) ಕೆನೆಪದರ ಆದಾಯ ಮಿತಿಯನ್ನು ನಾಲ್ಕೂವರೆ ಲಕ್ಷಕ್ಕೆ ಹೆಚ್ಚಿಸಲು ಸರ್ಕಾರ ಉದ್ದೇಶಿಸಿದೆಯೇ;

ಈ) ಇಲ್ಲದಿದ್ದಲ್ಲಿ, ಕಾರಣಗಳೇನು?